## ನಿಮ್ಮೊಡನೆ

# ಗಾಳಿ ನಂಜಾದೊಡೆ..

ವಿಶ್ವದ 12 ಅತಿ ಕಲುಷಿತ ನಗರಗಳಲ್ಲಿ 11 ಭಾರತದಲ್ಲೇ ಇವೆ ಎಂದು ಇತ್ತೀಚೆಗಷ್ಟೇ 'ಡಬ್ಲ್ಯುಎಚ್‌ಒ' ವರದಿ ತಿಳಿಸಿದೆ. ವಿದ್ಯುತ್ ಸ್ಥಾವರಗಳು, ಕೃಷಿ– ಕೈಗಾರಿಕಾ ತ್ಯಾಜ್ಯಗಳು, ಕಾರು– ಟ್ರಕ್‌ಗಳು, ಕಸ ದಹನ, ಇವೆಲ್ಲವೂ ಭಾರತದಲ್ಲಿನ ವಾಯುಮಾಲಿನ್ಯ ಹೆಚ್ಚಳಕ್ಕೆ ಕಾರಣವಾಗಿವೆ.

'ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ ಧರೆ ಹತ್ತಿ ಉರಿದಡೆ ನಿಲಲುಬಾರದು' ಎನ್ನುವ ಬಸವಣ್ಣನವರ ವಚನ ವಾಯು ಮಾಲಿನ್ಯದ ವಿಷಯದಲ್ಲಿ ಅನುಭವಕ್ಕೆ ಬರುವಂತಿದೆ. ಈವರೆಗೆ ಆತಂಕದ ರೂಪದಲ್ಲಿ ಚರ್ಚೆಗೊಳಗಾಗುತ್ತಿದ್ದ ಮಾಲಿನ್ಯದ ಸಮಸ್ಯೆ ನಮಗರಿವಿಲ್ಲದಂತೆಯೇ ನಮ್ಮ ಬದುಕನ್ನು ಆವರಿಸಿಕೊಂಡಿದೆ. ವಾಯುಮಂಡಲದಲ್ಲಿ ನಿಗದಿತ ಪ್ರಮಾಣವನ್ನು ಮೀರಿ ಹೆಚ್ಚುತ್ತಿರುವ ಮಾಲಿನ್ಯ ನಮ್ಮ ಉಸಿರು ಕಟ್ಟಿಸುತ್ತಿರುವ ಬಗ್ಗೆ 'ಎನ್‌ವಿರಾನ್‌ಮೆಂಟಲ್ ಸೈನ್ಸ್ ಅಂಡ್ ಟೆಕ್ನಿಕಲ್ ಲೆಟರ್ಸ್' ನಿಯತಕಾಲಿಕದಲ್ಲಿ ಪ್ರಕಟಗೊಂಡಿರುವ ವರದಿ ಎಚ್ಚರಿಕೆ ನೀಡುವಂತಿದೆ. ವಾಯು ಮಾಲಿನ್ಯದಿಂದಾಗಿ ನಮ್ಮ ಜೀವನದಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲ ಕಡಿತವಾಗುತ್ತದೆನ್ನುವ ಸಂಗತಿಯನ್ನು ಕಲ್ಪಿಸಿಕೊಳ್ಳುವುದೇ ಭೀತಿ ಹುಟ್ಟಿಸುವಂತಿದೆ. ವಿಶ್ವದ ವಿವಿಧ ದೇಶಗಳಲ್ಲಿನ ಮಾಲಿನ್ಯದ ಪ್ರಮಾಣವನ್ನು ಲೆಕ್ಕಹಾಕಿರುವ ಈ ಅಧ್ಯಯನ, ವಾಯುಮಾಲಿನ್ಯದಿಂದಾಗಿ ಭಾರತೀಯರ ಆಯುಷ್ಯದಲ್ಲಿ ಸರಾಸರಿ ಒಂದೂವರೆ ವರ್ಷ ಕಡಿಮೆಯಾಗಲಿದೆ ಎಂದು ಹೇಳಿದೆ. ಈ ಪ್ರಮಾಣ ಪಾಕಿಸ್ತಾನೀಯರಿಗೆ 1.56 ವರ್ಷ, ಚೀನೀಯರಿಗೆ 1.25 ವರ್ಷ, ಈಜಿಪ್ಟಿಯನ್ನರಿಗೆ 1.9 ವರ್ಷದಷ್ಟಿದ್ದರೆ, ರಷ್ಯನ್ನರ ಆಯುಷ್ಯದಲ್ಲಿ 9 ತಿಂಗಳಷ್ಟು ಕಡಿಮೆಯಾಗಲಿದೆ.

ವಿಶ್ವದಲ್ಲಿ ಪ್ರತಿ ವರ್ಷ 70 ಲಕ್ಷ ಮಂದಿ ವಾಯು ಮಾಲಿನ್ಯದಿಂದಾಗಿ ಸಾವಿಗೀಡಾಗುತ್ತಿದ್ದು, ಈ ನತದೃಷ್ಟರಲ್ಲಿ ಏಷ್ಯನ್ನರು ಹಾಗೂ ಆಫ್ರಿಕನ್ನರ ಸಂಖ್ಯೆಯೇ ಹೆಚ್ಚಾಗಿದೆ. ಭಾರತದಲ್ಲಿನ ವಾಯು ಗುಣಮಟ್ಟ ಸೂಚ್ಯಂಕ ಆತಂಕದ ಮಟ್ಟ ಮುಟ್ಟಿರುವ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಪದೇ ಪದೇ ಎಚ್ಚರಿಕೆಯನ್ನು ನೀಡುತ್ತಲೇ ಬಂದಿದೆ. ವಿಶ್ವದ 12 ಅತಿ ಕಲುಷಿತ ನಗರಗಳಲ್ಲಿ 11 ಭಾರತದಲ್ಲೇ ಇವೆ ಎಂದು ಇತ್ತೀಚೆಗಷ್ಟೇ 'ಡಬ್ಲ್ಯುಎಚ್‌ಒ' ವರದಿ ತಿಳಿಸಿದೆ. ವಿದ್ಯುತ್ ಸ್ಥಾವರಗಳು, ಕೃಷಿ– ಕೈಗಾರಿಕಾ ತ್ಯಾಜ್ಯಗಳು, ಕಾರು– ಟ್ರಕ್‌ಗಳು, ಕಸ ದಹನ, ಇವೆಲ್ಲವೂ ಭಾರತದಲ್ಲಿನ ವಾಯುಮಾಲಿನ್ಯ ಹೆಚ್ಚಳಕ್ಕೆ ಕಾರಣವಾಗಿವೆ. ಬಹುತೇಕ ಅಭಿವೃದ್ಧಿಶೀಲ ದೇಶಗಳು ಹಾಗೂ ಹಿಂದುಳಿದ ದೇಶಗಳದ್ದು ಭಾರತದಂತಹದ್ದೇ ಉಸಿರುಗಟ್ಟಿಸುವ ಸ್ಥಿತಿಯಾಗಿದೆ.

ಕಲುಷಿತ ಜೀವವಾಯು ಆರೋಗ್ಯದ ಮೇಲೆ ಉಂಟುಮಾಡುವ ಪರಿಣಾಮಗಳು ಒಂದೆರಡಲ್ಲ. ವಿಷವಾಯುವಿನ ದೀರ್ಘಕಾಲದ ಸಂಪರ್ಕದಿಂದ ಶ್ವಾಸಕೋಶ ಹಾಗೂ ಹೃದಯಸಂಬಂಧಿ ಸಮಸ್ಯೆಗಳು ಉಂಟಾಗುವ ಸಾಧ್ಯತೆಗಳು ಹೆಚ್ಚು. ಭಾರತದಲ್ಲಿನ ಸಾವು ನೋವುಗಳ ಪ್ರಮಾಣಕ್ಕೆ ಪ್ರಮುಖ ಕಾರಣವಾಗಿರುವ ರಕ್ತದೊತ್ತಡ, ತಂಬಾಕು ಸೇವನೆ ಹಾಗೂ ಅಪೌಷ್ಟಿಕತೆಗಳ ಸಾಲಿನಲ್ಲಿ ವಾಯುಮಾಲಿನ್ಯವೂ ಸೇರಿಕೊಂಡಿದೆ. ಹೊರಗಿನ ಹವೆಯಿಂದಷ್ಟೇ ಅಪಾಯ ಎಂದು ಭಾವಿಸುವಂತೆಯೂ ಇಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಸೀಮೆಎಣ್ಣೆ ಹಾಗೂ ಸೌದೆಯನ್ನು ಅಡುಗೆಗೆ ಬಳಸುತ್ತಿರುವುದು ಕೂಡ ಮನೆಯೊಳಗಿನ ಮಾಲಿನ್ಯ ಹೆಚ್ಚಾಗಲು ಕಾರಣವಾಗಿದೆ.

ವಿಶ್ವವನ್ನೆಲ್ಲ ಆವರಿಸಿಕೊಂಡಿರುವ ಪರಿಸರ ಮಾಲಿನ್ಯದಿಂದ ಬೆಂಗಳೂರು ಕೂಡ ಹೊರತಾಗಿಲ್ಲ. ಪುಣೆಯ ನಂತರ ಬೆಂಗಳೂರು ದೇಶದ 2ನೇ ಅತ್ಯಂತ ಕಲುಷಿತ ನಗರ ಎಂದು ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಇತ್ತೀಚೆಗೆ ವರದಿ ಮಾಡಿತ್ತು. ಬೆಂಗಳೂರಿನ ಹೊರವಲಯದಲ್ಲಿ ಹೆಚ್ಚುತ್ತಿರುವ ಕೈಗಾರಿಕೆಗಳು ಹಾಗೂ ನಗರದೊಳಗೆ ಡೀಸೆಲ್ ಜನರೇಟರ್‌ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿರುವುದು ವಾಯು ಮಾಲಿನ್ಯಕ್ಕೆ ಕಾರಣವಾಗಿದೆ ಎನ್ನಲಾಗಿದೆ. ಈ ವರದಿಯನ್ನು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಸ್ಪಷ್ಟವಾಗಿ ನಿರಾಕರಿಸಿದ್ದರೂ, ಬೆಂಗಳೂರಿನ ಪರಿಸರದ ಆರೋಗ್ಯ ಸಮಾಧಾನಕರವಾಗಿಯೇನೂ ಇಲ್ಲ. ಪ್ರತಿ ವರ್ಷ ಸುಮಾರು 5 ಲಕ್ಷ ಹೊಸ ವಾಹನಗಳು ರಸ್ತೆಗೆ ಸೇರ್ಪಡೆಯಾಗುತ್ತಿರುವಾಗ 'ಸಿಲಿಕಾನ್ ಸಿಟಿ'ಯ ನಾಗರಿಕರು ನೆಮ್ಮದಿಯಾಗಿ ಉಸಿರಾಡುವುದು ಹೇಗೆ ಸಾಧ್ಯ? ಉದ್ಯಾನ ನಗರಿ ಎನ್ನುವ ಹೆಗ್ಗಳಿಕೆ ಬೆಂಗಳೂರಿನ ಪಾಲಿಗೀಗ ಕೇವಲ ವಿಶೇಷಣವಾಗಿಯಷ್ಟೇ ಉಳಿದಿದೆ. ರಿಯಲ್ ಎಸ್ಟೇಟ್ ಭರಾಟೆಗೆ ಸಿಲುಕಿ ಕೆರೆಗಳನ್ನೂ ಹಸಿರು ವಲಯಗಳನ್ನೂ ಕಳೆದುಕೊಳ್ಳುತ್ತಿರುವ ನಗರ ತನ್ನ ಜೀವಕಳೆಯನ್ನು ಕಳೆದುಕೊಳ್ಳುತ್ತಿದೆ.

ಪರಿಸರದಲ್ಲಿ ಮನುಷ್ಯನ ಹಸ್ತಕ್ಷೇಪದಿಂದ ಉಂಟಾಗಬಹುದಾದ ಪರಿಣಾಮವನ್ನು ಕೊಡಗು, ಕೇರಳಗಳಲ್ಲಿ ಕಾಣುತ್ತಿದ್ದೇವೆ. ವಾಯುಮಾಲಿನ್ಯದ ಪರೋಕ್ಷ ಪರಿಣಾಮವನ್ನೂ ಅನುಭವಿಸುತ್ತಿದ್ದೇವೆ. ಅಸ್ತಮಾ, ರಕ್ತದೊತ್ತಡದಂತಹ ಸಮಸ್ಯೆಗಳು ಯುವಜನರಲ್ಲೂ ಮಕ್ಕಳಲ್ಲೂ ಹೆಚ್ಚುತ್ತಿರುವುದಕ್ಕೂ ಪರಿಸರ ಮಾಲಿನ್ಯಕ್ಕೂ ಸಂಬಂಧವಿದ್ದೇ ಇದೆ. ಆಹಾರ, ನೀರು, ಗಾಳಿ – ಎಲ್ಲದರಲ್ಲೂ ನಾವು ಬಳಸಿ ಎಸೆದ ಕಸವೇ ಸೇರಿಕೊಂಡು ಅದು ಮತ್ತೆ ನಮ್ಮ ದೇಹಕ್ಕೇ ಸೇರುತ್ತಿದೆ. ಪರಿಸರ ಮಾಲಿನ್ಯವನ್ನು ನಿಯಂತ್ರಿಸುವುದು ವ್ಯವಸ್ಥೆಯ ಆದ್ಯತೆ ಮತ್ತು ವೈಯಕ್ತಿಕ ತುರ್ತು ಕೂಡಾ ಆಗದೆಹೋದಲ್ಲಿ ಶುದ್ಧಗಾಳಿಯನ್ನು ಕೊಳ್ಳಲು ಪಾಳಿ ಹಚ್ಚಬೇಕಾದ ದಿನಗಳು ದೂರವೇನೂ ಇಲ್ಲ.

■ ರಘುನಾಥ ಚ.ಹ.



ಈಶ್ವರ್